ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ ೨೦ನೇ ನವೆಂಬರ್ ೧೯೯೦, ಕಾರ್ತೀಕ ೨೯, ೧೯೧೨ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧-೦೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಪೀಠವನ್ನು ಅಲಂಕರಿಸಿದ್ದರು.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೆ, ಬೇರೆ ವಿಷಯ ತೆಗೆದು ಕೊಳ್ಳುವುದಕ್ಕೆ ಮುಂಚೆ, ರಾಜ್ಯದ ಎಲ್ಲಾ ಕಡೆ ಸಪ್ಲಿಮೆಂಟರಿ ಟಿ.ಯು.ಸಿ. ಪರೀಕ್ಷೆಗಳು ನಡೆಯುತ್ತಿವೆ. ಪೇಪರ್ಸ್ ಎಲ್ಲಾ ಲೀಟ್ ಆಗುತ್ತಿವೆ. ಮತ್ತು ಪ್ರತಿಯೊಂದು ಪ್ರಶ್ನೆ ಪತ್ರಿಕೆ ಹೊರಗಡೆ ಬರುತ್ತಿದೆ. ಅದರ ಆಧಾರದ ಮೇಲೆ ಇಂಜಿನಿಯರಿಂಗ್, ಮೆಡಿಕಲ್ ಕಾಲೇಜು ಸೇರಿಂತಹ ದುಸ್ಥಿತಿ ಇವತ್ತು ಬಂದಿದೆ. ಪತ್ರಿಕೆಯಲ್ಲಿ ಸಹ ಕೊಡಗಿನಲ್ಲಿ, ಕೆ.ಆರ್. ನಗರದಲ್ಲಿ ಇರುವಂಥ ಕೆಲವು ಅಧ್ಯಾಪಕರನ್ನು ಅರೆಸ್ಟ್ ಮಾಡಿದ್ದಾರೆಂದು ಬಂದಿದೆ. ಸತತವಾಗಿ ಕಳೆದ ಎರಡು ಮೂರು ವರ್ಷಗಳಿಂದ ಇದು ನಡೆಯುತ್ತಿದ್ದರೂ ಸಹ ಸಂಬಂಧಪಟ್ಟ ಇಲಾಖೆಯವರು ಕಣ್ಣು ಮುಚ್ಚಿ ಕೊಂಡು ಕುಳಿತಿರುವ ಒಂದು ವಿಚಿತ್ರವಾದ ಸ್ಥಿತಿ ಇದೆ. ಎಜುಕೇಷನ್ ಡಿಪಾರ್ಟ್‌ಮೆಂಟ್‌ನ ಉನ್ನತ ಅಧಿಕಾರಿಗಳು ಶಾಮೀಲಾಗಿರುವಂಥ ಅನೇಕ ಪ್ರಕರಣಗಳು ಬಯಲಾಗಿವೆ. ವಿದ್ಯಾರ್ಥಿಗಳ ಮುಂದಿನ ಭವಿಷ್ಯದ ಪ್ರಶ್ನೆ ಇದೆ.

ಅಧ್ಯಕ್ಷರು.—ಪ್ರಶ್ನೋತ್ತರ ಕಾಲ ಆಗಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಬೆಳಿಗ್ಗೆ ೯ ಗಂಟೆಗೆ ಎಗ್ಸಾಮ್ ಪ್ರಾರಂಭವಾಗುವ ವರೆಗೆ ಇಂಗ್ಲೀಷ್ ಪತ್ರಿಕೆ ಏನು ಬರುತ್ತಿದೆ ಅದನ್ನು ನಿಮ್ಮ ಗಮನಕ್ಕೆ ಕಳುಹಿಸಿಕೊಟ್ಟಿದ್ದೆ. ಏಕೆಂದರೆ ಆಮೇಲೆ ಪ್ರಸ್ತಾಪ ಮಾಡಿದರೆ ಸರಿ ಹೋಗುವುದಿಲ್ಲ ಎಂದು.

ಅಧ್ಯಕ್ಷರು.—ಅದು ಬಂತು ನನಗೆ. ಆಮೇಲೆ ನೀವು ನನ್ನನ್ನು ಬಂದು ಭೇಟಿ ಮಾಡಿದಾಗ ನಾನು ಹೇಳಿದೆ ಪ್ರಶ್ನೋತ್ತರ ಆದಮೇಲೆ ಇದನ್ನು ತಾವು ರೈಸ್ ಮಾಡಿ ಎಂದು. ಈಗ ಪ್ರಶ್ನೆಗಳಿಗೆ ಮೊದಲು ಮಾನ್ಯ ಮುಖ್ಯಮಂತ್ರಿಗಳು ಹೊಸ ಸಚಿವರ ಪರಿಚಯ ಮಾಡಿಕೊಡಬಹುದು.

ಶ್ರೀ ವಾಟಾಳ್ ನಾಗರಾಜ್.—ಈಗ ಪರಿಚಯದ ಜೊತೆ ಯಾರು ಯಾರು ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆ ಎಂಬುದನ್ನೂ ತಿಳಿಸಬೇಕು. ತಮಗೆ ಕ್ಷೇಮ ಆದು ಬಂದಿದ್ದರೆ ಅದನ್ನು ಕಳುಹಿಸಿದರೆ ಚೆನ್ನಾಗಿರುತ್ತದೆ. ಮಂತ್ರಿಗಳಿಗೆ ಅಸಮಾಧಾನವಾಗಿರತಕ್ಕದ್ದು ಪತ್ರಿಕೆಗಳಲ್ಲಿ ಬಂದಿರುವುದನ್ನು ನೋಡಿದ್ದೇವೆ. ಮಹಿಳಾ ಸದಸ್ಯರು ಅವರ ಸಭೆಗೆ ಹೋಗಿಲ್ಲ. ಎಷ್ಟು ಜನ ರಾಜೀನಾಮೆ ಕೊಟ್ಟಿದ್ದಾರೆಂದು ತಿಳಿಸಬೇಕು. ಅನೇಕ ಕೋವಿನವರಿಗೆ ಅನ್ಯಾಯವಾಗಿದೆ ಎಂದು ಪತ್ರಿಕೆಗಳಲ್ಲಿ ಬಂದಿದೆ. ಕೆ. ಪೆಚ್. ಪಾಟೀಲರು ಕೊಟ್ಟಿರುವ ಹೇಳಿಕೆ ಪ್ರಮುಖ ಪತ್ರಿಕೆಗಳಲ್ಲಿ ಬಂದಿದೆ.

ಒಬ್ಬ ಆಡಳಿತ ಪಕ್ಷದ ಸದಸ್ಯರು.—ವಾಟಾಳ್ ನಾಗರಾಜ್ ಅವರು ಸತ್ತೋದರು ಎಂದು ಪತ್ರಿಕೆಯಲ್ಲಿ ಬಂದಿದೆ.